ಅವನಿಗೆ ಹಣ ಕೊಡಲು ಹೇಳಿ ಒಪ್ಪಿಸಿದ್ದರು. ಆದರೆ ರಾಜಣ್ಣ ಹೋತ ಕುಯ್ದು ಮೇಲೆ 'ಆ ಹೋತದ ಮೇಲೆ ನಮ್ಮ ಮನೆಯವರಿಗೆಲ್ಲಾ ಹಕ್ಕಿದೆ. ಅದನ್ನು ನಾವೆಲ್ಲಾ ಸಾಕಿದ್ದೇವೆ. ಹಾಗಾಗಿ ಚಂದ್ರಪ್ಪನಿಗೆ ಹಣ ಕೊಡಬೇಕಾಗಿಲ್ಲ' ಎಂದು ವಿರೋಧಿಸಿದ್ದ. ಆಗ ಆ ಪ್ರಸಂಗ ಪೊಲೀಸ್ ಸ್ಟೇಷನ್‌ವರೆಗೂ ಹೋಗಿತ್ತು. ಆ ಸಂದರ್ಭದಲ್ಲಿ ರಾಜಣ್ಣನ ಮೇಲೆ ಚಂದ್ರಪ್ಪ ಕಂಪ್ಲೆಂಟ್ ಕೊಟ್ಟು ಅವನನ್ನು ಕರೆಸಿ ಪೊಲೀಸರಿಂದ ಹೊಡೆಸಿದ್ದ. ಆಗಿನಿಂದಲೂ ರಾಜಣ್ಣನಿಗೂ ಚಂದ್ರಪ್ಪನಿಗೂ ಹತ್ತಿದ್ದು ಅರಿರಲಿಲ್ಲ. ರಾಜಣ್ಣ ಮಿಡ್ಲ್ ಸ್ಕೂಲ್ ವರೆಗೂ ಓದಿ ನಾಲ್ಕಕ್ಷರ ಕಲಿತಿದ್ದರಿಂದ ಅನೇಕಸಾರಿ 'ನಾನು ಈ ಊರಿನಲ್ಲಿ ಇರಲ್ಲ, ನನ್ನ ವಾರಿಗೆಯವರ ಥರ ನಾನೂ ಬೆಂಗಳೂರಿಗೆ ಹೋಗಿ ಕೆಲಸ ಹುಡುಕ್ತಿನಿ' ಎಂದು ಹೇಳುತ್ತಲೇ ಇದ್ದ.

ಆದರೆ ಕಜ್ಜಿನಿಂಗಣ್ಣ, 'ಊರಿನ ಹಿರಿಯರು ನಾಲ್ಕು ಜನ ಅಂತ ಇಲ್ಲದೆ ಇದ್ದರೆ ಹೇಗೆ? ಇವರಿಗೆ ಆಸ್ತಿಪಾಲು ಮಾಡಿಕೊಡುವಾಗ ಅವರು ಬ್ಯಾಡವೆ? ನಾಳೆ ಇವರಲ್ಲಿ ಹೆಚ್ಚುಕಮ್ಮಿ ಭಿನ್ನಾಭಿಪ್ರಾಯ ಬಂದರೆ, ಆಗ ನಾವು 'ಆ ಹಿರಿಯರ ಸಮ್ಮುಖದಲ್ಲಿ ನೀವೇ ಒಪ್ಪಿಕೊಂಡಿದ್ರಲ್ಲ' ಅಂತ ಕೇಳುವುದಕ್ಕೆ ಒಂದು ಸಾಕ್ಷಿ ಇರ್ತದೆ. ಅದಕ್ಕಾದರೂ ಊರಿನ ನಾಲ್ಕು ಜನ ಯಾರಾದ್ರು ಹಿರಿಯ ಮುಖಂಡರು ನ್ಯಾಯದಲ್ಲಿ ಇದ್ದರೆ ಒಳ್ಳೆಯದಲ್ಲವೆ?' ಎಂದು ಕೇಳಿದ.

'ನಿಮ್ಮ ಸಲಹೆ ಏನೋ ಚೆನ್ನಾಗಿದೆ! ಆದರೆ ಅವರಾರು ಬ್ಯಾಡ ಬಿಡಿ. ನೀವೇ ಅದೇನು ಭಾಗ ಮಾಡಿಕೊಡಿ. ನೀವು ಕೊಟ್ಟಿದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾವು ನಮಗೆ ಇದೇ ಬೇಕು ಅದೇ ಬೇಕು ಅಂತ ಹಟ ಮಾಡುವುದಿಲ್ಲ. ನೀವು ಹಂಚಿಕೊಟ್ಟ ಆಸ್ತಿಯನ್ನು ನಾವು ಸ್ವೀಕರಿಸುತ್ತೇವೆ. ಇದಕ್ಕೆ ನೀವು ಆಣೆ ಪ್ರಮಾಣ ಏನಾದ್ರು ಮಾಡಿ ಅಂದ್ರೆ ಅದ್ನೂ ಮಾಡ್ತೀವಿ' ಎಂದ ಸಿದ್ದಯ್ಯ.

ಸಿದ್ದಯ್ಯನ ಈ ಮಾತಿಗೆ ಎಮ್ಮೆಕಾಳಯ್ಯ, 'ಸಿದ್ದಯ್ಯನ ಮಾತಿಗೆ ನಿಮ್ಮಿಬ್ಬರದೂ ಒಪ್ಪಿಗೆ ಇದೆಯಾ?' ಎಂದು ಚಂದ್ರಪ್ಪ ಹಾಗೂ ರಾಜಣ್ಣನನ್ನು ಕೇಳಿದಾಗ, ಅವರಿಬ್ಬರೂ ಆಗಬಹುದು ಎಂದು ಮೌನವಾಗಿಯೇ ತಮ್ಮ ಸಹಮತವನ್ನು ಸೂಚಿಸಿದರು. ಕಜ್ಜಿನಿಂಗಣ್ಣ ಸ್ವಲ್ಪ ಗಡುಸಾಗಿ, 'ರಾಜಣ್ಣ, ನೀನು ಮತ್ತೆ ಏನೂ ತಕರಾರು ತೆಗಿಬಾರದು. ಹೊಲಮನೆ ದವಸ ಧಾನ್ಯವನ್ನೆಲ್ಲಾ ಮೂರು ಪಾಲು ಮಾಡುತ್ತೇವೆ. ಅದರಲ್ಲಿ ನಿಮ್ಮವ್ವನಿಗೆ ಇರೋತನಕ ಅಂತ ಜೀವನಾಂಶಕ್ಕೆ ಒಂದಿಷ್ಟು ಗದ್ದೆ ಮನೆ ಅಂತ ಬಿಡಬೇಕಾಗುತ್ತದೆ. ಆಮೇಲೆ ಅವಳು ಯಾವ ಮಗನ ಜೊತೆಗಿರ್ತಾಳೋ ಅವ್ನ ಜೊತೆ ಇರ್ಲಿ. ಅವಳು ನಾನು ಯಾರ ಜೊತೆಯಲ್ಲೂ ಇರಲ್ಲ ಅಂದ್ರೆ, ಬೇರೆಯೇ ಇರಲಿ. ಮನೆಯಲ್ಲಿ ಅವಳಿಗೆ ಒಂದು ರೂಮು ಬಿಡುವ. ಆದ್ರೆ ಅದು ನಿಮ್ಮವ್ವನಿಗೆ ಬಿಟ್ಟ ವಿಚಾರ' ಎಂದ.

ಸಿದ್ದಯ್ಯ, 'ನಮ್ಮವ್ವ ನನ್ನ ಜೊತೆಯಲ್ಲೇ ಇರಲಿ, ಇರ್ತಾಳೆ. ಅವಳು ಬೇರೆ ಇರೋದು ಬ್ಯಾಡ. ಚಂದ್ರಪ್ಪನ ಜೊತೆಯಲ್ಲಿ ಬೇಡ. ಅವನು ಮಕ್ಕಳೊಂದಿಗ. ಜೊತೆಗೆ ಅವನು ದುಡಿಯಲಾರ. ರಾಜಣ್ಣನ ಮನಸ್ಸು ಏನು ಅಂತ ನಮಗೂ ಅರ್ಥವಾಗಲ್ಲ. ಒಂದಿನ, ಈ ಊರ್‍ನಲ್ಲೇ ರಾಜನಂಗೆ ಬದುಕ್ತೀನಿ ಅಂತಾನೆ. ಇನ್ನೊಂದು ದಿನ ನಾನು ಬೆಂಗಳೂರು ಪೇಟೆಗೆ ಹೋಗಿ ಸಂಪಾದ್ನೆ ಮಾಡ್ತೀನಿ ಅಂತಾನೆ' ಎಂದ.

ಅದಕ್ಕೆ ಚಿನ್ನವ್ವನ ಒಪ್ಪಿಗೆ ಕೇಳಿದರು. ಅದಕ್ಕೆ ಆಕೆ ತಾನು ಯೋಚನೆ ಮಾಡಿ ತಿಳಿಸುವುದಾಗಿ ಹೇಳಿದಳು. ಎಮ್ಮೆಕಾಳಯ್ಯ, 'ಈ ದಿನ ನನಗೆ ಬಿಡುವಿಲ್ಲ, ಪೇಟೆಗೆ ಮಾರುಕಟ್ಟೆಗೆ ರೇಷ್ಮೆಗೂಡು ಹೊತ್ಕೊಂಡು ಹೋಗಬೇಕು. ಇವತ್ತು ಎಲ್ಲವನ್ನೂ ವಿವರವಾಗಿ ಮಾತನಾಡಲು ಆಗಲ್ಲ. ಅದಕ್ಕೆ ಮುಂದಿನ ಭಾನುವಾರ ಮಧ್ಯಾಹ್ನಕ್ಕೆ ಇಟ್ಟುಕೊಳ್ಳಿ. ಅಷ್ಟೊತ್ತಿಗೆ ನಿಮ್ಮ ಆಸ್ತಿ ಹಣ ಸಾಲ ವಗೈರೆಗಳ ವಿವರಗಳನ್ನೆಲ್ಲಾ ನೀವು ಕಲೆಹಾಕಿಕೊಳ್ಳಿ. ಅವತ್ತು ಎಲ್ಲವನ್ನೂ ಹಂಚಿಕೆ ಮಾಡುವ' ಎನ್ನುತ್ತಾ ಎದ್ದು ಹೊರಡಲು ಸಿದ್ಧನಾದ.

ಕಜ್ಜಿನಿಂಗಣ್ಣನೂ 'ಮಳೆ ಬಂದರೆ ಹೊಲಕ್ಕೆ ಆರು ಹೂಡಬೇಕಾಗುತ್ತದೆ. ನೇಗಿಲು ಇಲ್ಲ. ಹೊಸ ನೇಗಿಲು ಕೆತ್ತಿ ರೆಡಿ ಮಾಡಬೇಕಾಗಿದೆ. ಅದಕ್ಕೆ ನನಗೂ ಇವತ್ತು ಬಿಡುವಿಲ್ಲ. ಅಣ್ಣ ಕಾಳಯ್ಯ ಹೇಳಿದಂತೆಯೇ ಮುಂದಿನ ಭಾನುವಾರವೇ ಈ ಕಾರ್ಯ ಇಟ್ಟುಕೊಳ್ಳೋಣ' ಎನ್ನುತ್ತಾ ಅವನೂ ಎದ್ದು ಹೊರಡಲು ಸಿದ್ಧನಾದ.

ಚಿನ್ನವ್ವ, 'ಹಾಗಾದ್ರೆ ಮುಂದಿನ ಭಾನುವಾರ ತಪ್ಪಿಸ್ಕೋಬೇಡಿ ನೀವು. ಅವತ್ತು ಮಧ್ಯಾಹ್ನಕ್ಕೆ ಇಲ್ಲೇ ನಿಮಗೂ ಅಡುಗೆ ಮಾಡ್ತಿನಿ' ಎಂದಳು. ನಡುಮನೆಯಿಂದ ಹೊರಗೆ ಹೊರಟು ನಿಂತಿದ್ದ